ನೋಡಿ ಬಟ್ಟೆಬರೆ ತಗೊಂಡು ಮನೆಬಿಟ್ಟು ಹೋದ್ನೋ ಅಂತ ಪರೀಕ್ಷಿಸ್ತಿದ್ದೆ. ಹೌದು ತಾನೇ?' ಮಾತು ಕೆಳದನಿಯಲ್ಲೆ ಇದ್ದರೂ ತೀಕ್ಷ್ಣತೆ ಚುಚ್ಚಿತು. ಅಷ್ಟು ತಡವಾದಾಗ ಮೂಡಿದ ಆತಂಕಕ್ಕೆ ಹೀಗೆ ಸುಳಿದ ಸಂದೇಹವೂ ಒಂದು ಮಾರ್ಗಸೂಚಿಯಾಗಿತ್ತೇ ವಿನಹ... ಏನೇ ಇದ್ದರೂ ಅದು ತಪ್ಪಾಗಿತ್ತು ಅಂತ ಹತ್ತುಬಾರಿ ಅನಿಸಿತ್ತು ರಾತ್ರಿಯಿಂದ. ಯಾವ ವಿವರಣೆಯೂ ಈಗ ಸರಿಯಾಗದು ಅನಿಸಿದ್ದಕ್ಕೆ 'ಕ್ಷಮಿಸೆ ವಲ್ಲರಿ' ಅಂದ. 'ಸರಿ... ನೋಡು, ನಾನು ಹೋಗೋದೆ ಆದ್ರೆ ಹಾಡಹಗಲು, ನಿನಗೆ ಹೇಳೇ ಹೋಗತೀನಿ. ಯಾವ ಹೆದ್ರಿಕೆಗೆ ನಾನು ಕದ್ದುಮುಚ್ಚಿ ಹೋಗ್ಬೇಕು ಹೇಳು?' ಉಪ್ಪಿಟ್ಟಿನ ಪ್ಲೇಟನ್ನು ಟೀಪಾಯಿ ಮೇಲಿಟ್ಟವಳು, '...ಮೊಬೈಲನ್ನು ಬ್ಯಾಗಿನಲ್ಲಿಟ್ಟಿದ್ದೆ. ಅಮ್ಮನ್ನ, ತಮ್ಮನ್ನ ವರ್ಷದ ನಂತರ ಕಂಡ ಖುಷೀಲಿ ಮೊಬೈಲಿರೋದು ಸಹ ನೆನಪಿರ್ಲಿಲ್ಲ' ವಿವರಣೆ ಕೊಡುತ್ತ ಕಾಫಿ ತಂದವಳು 'ಉಪ್ಪಿಟ್ಟು ತಗೊ, ತಿನ್ನು' ಅಂದಳು. ವಿಷಯ ಬದಲಾವಣೆಯೇ ಉತ್ತಮ ಅನಿಸಿದ್ದಕ್ಕೆ ಉಪ್ಪಿಟ್ಟು ಆಸ್ವಾದಿಸುತ್ತಾ 'ತುಂಬಾ ರುಚಿಯಾಗಿ ಮಾಡತೀಯ' ಅಂದ. 'ಅಮ್ಮ ಕಲಿಸಿದ್ದು; ಅಷ್ಟಕ್ಕಾದ್ರೂ ಋಣಿಯಾಗಿರ್ಬೇಕು ನಾನು' ಅಂದಳು. 'ಮತ್ತೆ ಊರಿಗೆ ಹೋಗಿ ಬರ್ತಿರಬೇಕು ಅಂತೇನಾದ್ರೂ ಅನಕೋತಿದೀಯ?' 'ನೆವರ್. ವರ್ಷಗಳ ನಂತರ ಇವರು ಸಿಕ್ಕಿದ್ದಕ್ಕೆ ಎದೆತುಂಬಾ ಸಂತೋಷವಾದ್ದು ಸುಳ್ಳಲ್ಲ. ಹಾಗಂತ ಮನೇಲಿ ವಾತಾವರಣ ಬದಲಾಗಿದೆ ಅಂತ ಅಲ್ಲ.' ಪ್ಲೇಟು ತೆಗೆದುಕೊಂಡೆದ್ದಳು.

ಕಂಪೆನಿ ವಾರಾಂತ್ಯದಲ್ಲಿ ಸಂತೋಷಕೂಟ ಏರ್ಪಾಟು ಮಾಡಿತು. 'ತುಮಕೂರು ಹತ್ರ, ರಾತ್ರಿ ಅಲ್ಲೆ ಸ್ಟೇ.' ಅವಳೆಂದಿದ್ದಕ್ಕೆ 'ನೀನು ಹೋಗ್ಲೇಬೇಕ?' ಕೇಳಿದ. 'ಎಂಪ್ಲಾಯೀಸ್‌ಗಾಗೇ ಇದನ್ನ ಏರ್ಪಾಟು ಮಾಡಿದ್ದು. ಎಲ್ಲಾ ಬರ್ತಾರೆ. ನಾನು ಹೋಗದಿರೋಕೆ ಕಾರಣ ಏನಿದೆ?' ಅವಳ ಸಂತೋಷ ಅವನನ್ನ ಸಣ್ಣಕೆ ನಿರುತ್ಸಾಹಗೊಳಿಸಿತು. ಹೊರಟ ದಿನ ಮೊದಲ ಫೋನು ಕರೆ ಮಾಡಿದಾಗ 'ರೆಸಾರ್ಟ್‌ಗೆ ಬಂದು ಈಗ ಅರ್ಧಗಂಟೆಯಾಯ್ತಷ್ಟೆ...' ಅಂದಿದ್ದಳು. ಹಿನ್ನೆಲೆಯಲ್ಲಿ ಗಂಡು ಹೆಣ್ಣು ಸ್ವರಗಳಲ್ಲಿ ಸಂಭ್ರಮ ಸಿಡಿಯುವುದು ಕೇಳುತ್ತಿತ್ತು. ಎರಡುಗಂಟೆ ಬಿಟ್ಟು ಮತ್ತೆ ಕರೆ ಮಾಡಿದ. 'ಈಗಷ್ಟೆ ಮಾತಾಡಿದ್ವಲ್ಲ...' ಅಂತಲೆ ಸುರು ಮಾಡಿದ್ದಳು. ಅಕಾರಣ ಅಸೂಯೆ ಅನುಭವಿಸಿ ಮನೆಯಲ್ಲಿರಲಾರದೆ ಸಿನಿಮಾ ಹುಡುಕಿಕೊಂಡು ಹೊರಬಿದ್ದ. ಇಂಟರ್ವೆಲ್‌ನಲ್ಲಿ ಫೋನು ಮಾಡಿ ಟಾಕೀಸಿಗೆ ಬಂದಿರುವುದನ್ನು ಹೇಳಿ ಒಳ್ಳೇ ಸಿನಿಮಾ ಮಿಸ್ ಮಾಡಕೊಂಡೆ ನೀನು ಅಂತ ಸೇರಿಸಿದ. 'ಇಟ್ಸ್ ಓಕೆ, ಎಂಜಾಯ್ ಮಾಡು' ಅಂತ ಕರೆ ತುಂಡರಿಸಿದ್ದಳು. ಯಾಕೋ ಮುಂದೆ ನೋಡುವ ಉತ್ಸಾಹ ಬತ್ತಿತು. ಎಲ್ಲೆಲ್ಲೊ ಅಲೆದಾಡಿ ಮನೆ ಸೇರಿದ. ಮರುದಿನ ವಾಪಸು ಬಂದವಳು, ಸಂಜೆ ಲವಲವಿಕೆಯಲ್ಲಿ ಅಲ್ಲಿಯ ಸುದ್ದಿ ಹೇಳುತ್ತಿರುವಾಗ, 'ನೀನು ನನ್ನ ಫೋನಿಂದ ಡಿಸ್ಟರ್ಬಾದಂತೆ ಭಾಸವಾಯ್ತು' ಅಂದದ್ದಕ್ಕೆ ತಟ್ಟನೆ ಗಂಭೀರಳಾಗಿ, 'ಅಲ್ವೋ ಇಂತದ್ದನ್ನ ಏರ್ಪಡಿಸೋದು ಬದಲಾವಣೆಗೇಂತ. ಅಲ್ದೆ ನಾನಾತರದ ಆಟ, ಸ್ಪರ್ಧೆ ಅಂತ ಬೀಜಿ ಇಟ್ಟಿರ್ತಾರೆ. ಎರಡೆರಡು ತಾಸಿಗೆ ಫೋನು ಮಾಡಿದ್ರೆ ಉಳಿದೋರು ಏನನ್ಕೋತಾರೆ ಹೇಳು?' ಅಂದಳು. 'ಗಂಡಸ್ರು ಹೆಂಗಸ್ರು ಚೆನ್ನಾಗಿ ಎಂಜಾಯ್ ಮಾಡಿದ್ರಿ ಒಟ್ಟಿನಲ್ಲಿ...' ಅಪ್ರಯತ್ನವಾಗಿ ಬಂದ ಮಾತು ಅಸಹನೆಯನ್ನೂ ಬಿಟ್ಟುಕೊಟ್ಟಿತು. ಮೌನವಾಗಿ ಅವನನ್ನೆ ನೋಡಿದವಳು, 'ಛೆ! ನನ್ನ ಮೂಡೆಲ್ಲ ಹಾಳುಮಾಡ್ಬಿಟ್ಟೆ ನೀನು. ಈಗ ಮಾತು ಬೇಡ...' ಎದ್ದು ಬಾಲ್ಕನಿಗೆ ಹೋದಳು. ಆ ಕ್ಷಣದ ಅಚಾತುರ್ಯಕ್ಕೆ ಕಾರಣ ಹುಡುಕುತ್ತಾ ರೂಮಿನಲ್ಲಿ ಕುಳಿತಿದ್ದವನಿಗೆ ಇಂತದನ್ನೆಲ್ಲ ಉತ್ತೇಜಿಸುವ ಒಳಗಿನ ತಳಮಳದ ಮೂಲ ಸ್ಪಷ್ಟವಾಗಲೇ ಇಲ್ಲ. ಅದು ಕಮ್ಮಿಯಾಗಲೂ ಇಲ್ಲ. ರಾತ್ರಿ ಊಟದ ನಂತರ ಒಂದು ನಿರ್ಧಾರಕ್ಕೆ ಬಂದು 'ವಲ್ಲರೀ...' ಅಂದ. ಇವನತ್ತ